# ರೇಷ್ಮೆನಾಡು

ಜಿಲ್ಲಾ ಜನಪರ ದಿನಪತ್ರಿಕೆ

ಸಂಪಾದಕರು: ಸವಿತಾ ಜಯಂತ್

reshmenadudaily@gmail.com



**ಅಂಗಡಿ ಮಳಿಗೆ ಬಾಡಿಗೆಗೆ**

35 X 11, ಚದುರ ಅಡಿ ವಿಸ್ತೀರ್ಣವುಳ್ಳ ಅಂಗಡಿ ಮಳಿಗೆ ಬಾಡಿಗೆಗೆ ದೊರೆಯುತ್ತದೆ, ಸಂಪರ್ಕಿಸಿ: 9449035768



ವಾರ್ಡ್ ನಂ. 26, ರೇನಾ ಕಾರ್ನರ್, ರೇಷ್ಮೆನಾಡು ಬಿಲ್ಡಿಂಗ್, ಫಾರೆಸ್ಟ್ ನರ್ಸರಿ ರಸ್ತೆ ಚಾಮರಾಜನಗರ

ಸಂಪುಟ–37 ಸಂಚಿಕೆ: 116 Postal Reg. No.j/KA/SK/NJD-329/2024-2026 KAR/KAN/P/RNI-NO-58162/1992 ಚಾಮರಾಜನಗರ 01–09–2026 ಮಂಗಳವಾರ ಫೋನ್ 222623, ಪುಟ–4 ರೂ.

Volume-37 Edition 116 Postal Reg.No.j/KA/SK/NJD-329/2024-2026 KAR/KAN/P/RNI-NO-58162/1992 Chamarajanagara 01-09-2026 Tuesday Phone 222623 Page-4 Rs.2


# ಜಿಲ್ಲೆ ಬರಪೀಡಿತವೆಂದು ಘೋಷಣೆಯೇನು ಆಯಿತು, ಮುಂದೆ ಸಮರ್ಪಕವಾಗಿ ನಿರ್ವಹಿಸಿ

## ತಕ್ಷಣ ಕುಡಿಯುವ ನೀರು, ಮೇವು ತುರ್ತಾಗಿ ಒದಗಿಸಲು ಆಗ್ರಹ

**ಎಂ. ಲಿಂಗಪ್ಪ**

ನಗರ, ಆ.31 ಕೇಂದ್ರದ ಮಾರ್ಗ ಸೂಚಿಯಂತೆ ಜಿಲ್ಲೆ ಬರಪೀಡಿತವೆಂದು ಘೋಷಣೆಯಾಗಿದೆ, ಇನ್ನು ಮುಂದೆ ಸಮರ್ಪಕವಾಗಿ ಬರ ನಿರ್ವಹಣೆ ಮಾಡಿ ಕುಡಿಯುವ ನೀರು, ಮೇವು ತುರ್ತಾಗಿ ಒದಸಿ ಎಂದು ರೈತರು ಹಾಗೂ ನಾಗರೀಕರು ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ

ಎಲ್ಲೂ ಜನರು ವಲಸೆ ಹೋಗದಂತೆ ನೋಡಿಕೊಳ್ಳಬೇಕು, ತುರ್ತಾಗಿ ಕುಡಿಯುವ ನೀರು, ಮೇವು, ಸಮರ್ಪಕವಾಗಿ ಪೂರೈಕೆಯಾಗಬೇಕು, ಅಧಿಕಾರಿಗಳು ಕೇಂದ್ರ ಪ್ರದೇಶದಲ್ಲಿ ಇದ್ದು.ಯಾವುದೇ ಕೆಲಸ ಆಗಬೇಕಾದರೂ ಖುದ್ದಾಗಿ ಇರಬೇಕು, ಚಾಮರಾಜನಗರ ಜಿಲ್ಲೆಯಲ್ಲಿ ಪ್ರಸಕ್ತ ವರ್ಷ ಮುಂಗಾರು ಪೂರ್ವ ಮತ್ತು ಮುಂಗಾರು ಮಳೆಯ ತೀವ್ರಕೊರತೆಯಿಂದಾಗಿ ಗಂಭೀರ ಬರ ಪರಿಸ್ಥಿತಿ ತಲೆದೂರಿ ಬರ ಆವರಿಸಿದೆ ಜಿಲ್ಲಾಡಳಿತ ಹಾಗೂ ವಿವಿಧ ತಂಡಗಳು ನಡೆಸಿದ ಜಂಟಿ ಸಮೀಕ್ಷೆಗಳ ಆಧಾರದ ಮೇಲೆ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲಾಗಿದೆ

ಮಳೆ ಕೊರತೆಯ ವಿವರ ಪೂರ್ವ ಮುಂಗಾರು ವೈಫಲ್ಯ, ಏಪ್ರಿಲ್ ತಿಂಗಳಲ್ಲಿ ಶೇ. 74.9 ರಷ್ಟು ಮತ್ತು ಮೇ ತಿಂಗಳಲ್ಲಿ ಶೇ. 69.8 ರಷ್ಟು ಮಳೆ ಕೊರತೆ ದಾಖಲಾಗಿದೆ ಅಂತರ್ಜಲ ಕುಸಿತದಿಂದಾಗಿ ತೆರೆದ ಬಾವಿ ಹಾಗೂ ಬೋರ್‌ವೆಲ್‌ಗಳು ಬತ್ತಿವೆ

ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಜಿಲ್ಲಾಡಳಿತ ಜಿಲ್ಲೆಯ ಮಳೆ ಅಭಾವ ಮತ್ತು ಕುಡಿಯುವ ನೀರಿನ ಬಿಕ್ಕಟ್ಟಿನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ವಿಪಕ್ಷಗಳ ತಂಡ ಇತ್ತೀಚೆಗೆ ವಿರೋಧ ಪಕ್ಷದ ನಾಯಕರ ನೇತೃತ್ವದ ಬರ ಅಧ್ಯಯನ ಸಮಿತಿ ಜಿಲ್ಲೆಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ, ಬೆಳೆ ಹಾನಿ ವೀಕ್ಷಿಸಿ ರೈತರಿಂದ ನೇರ ಪ್ರತಿಕ್ರಿಯೆ ಪಡೆದಿದೆ. ಜಿಲಾ ಉಸ್ತುವಾರಿ ಸಚಿವ ಸಿ. ಪುಟ್ಟರಂಗಶೆಟ್ಟಿ ಅವರು ಈಗಾಗಲೇ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಬರ ಅಧ್ಯಯನ ನಡೆಸಿ, ಅಧಿಕಾರಿಗಳಿಂದ ವರದಿ ತಯಾರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಲಿದ್ದಾರೆ, ಇದರ ಆಧಾರದ ಮೇಲೆ ಬರಪೀಡಿತ ಪ್ರದೇಶ ಎಂದು ಘೋಷಿಸಲಾಗಿದೆ.

ಹನೂರು ಭಾಗದ ಸೇರಿದಂತೆ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ. ಸದ್ಯ ಟ್ಯಾಂಕರ್‌ನಲ್ಲಿ ಸಮಸ್ಯೆ ಎದುರಿಸುತ್ತಿರುವ ಗ್ರಾಮಗಳಿಗೆ ನೀರು ಪೂರೈಸಲಾಗುತ್ತಿದೆಯಾದರೂ ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆ ಇನ್ನು ಹೆಚ್ಚಾಗಬಹುದು. ತಕ್ಷಣ ಜಿಲ್ಲಾಡಳಿತ ಈ ಬಗ್ಗೆ ತುರ್ತು ಕ್ರಮಕೈಗೊಳ್ಳಬೇಕಾಗಿದೆ

ಮಳೆ ಕೊರತೆ ಪರಿಣಾಮವಾಗಿ ಜಿಲ್ಲೆಯಲ್ಲಿ ಬೆಳೆ ನಷ್ಟವಾಗಿ ಜಾನುವಾರುಗಳಿಗೆ ಮೇವು ದೊರೆಯದ ಹಾಗಿದೆ. ಇನ್ನು ಕೆಲವು




ವಾರಗಳಿಗಷ್ಟೇ ಈಗ ದಾಸ್ತಾನಿರುವ ಮೇವು ಸಾಕಾಗಲಿದೆ.

ಮುಂದಿನ ದಿನಗಳಲ್ಲಿ ಜಾನುವಾರುಗಳಿಗೆ ಮೇವು ಒದಗಿಸಿವುದೇ ಸವಲಾಗುತ್ತದೆ. ತಕ್ಷಣ ಗೋಶಾ ಲೆಯನ್ನು ತೆರೆದು ಜಾನುವಾರುಗಳಿಗೆ ಮೇವು ಒದಗಿಸಿ ಎಂದು ರೈತ ಸಂಘಟನೆಗಳು ಆಗ್ರಹಿಸಿವೆ.

ಜಿಲ್ಲಾಡಳಿತ ಮತ್ತು ಉಸ್ತುವಾರಿ ಸಚಿವರಾದ ಸಿ.ಪುಟ್ಟರಂಗಶೆಟ್ಟಿ ಅವರು ಕುಡಿಯುವ ನೀರಿನ ಕೊರತೆಯಾಗದಂತೆ ಮುನ್ನೆಚ್ಚ–ರಿಕೆ ವಹಿಸಲು ಆದೇಶಿಸಿದ್ದಾರೆ. ಟ್ಯಾಂಕರ್ ಮತ್ತು ಮೋಟಾರ್‌ಗಳ ಅಳವಡಿಕೆ, ಈಗಾಗಲೇ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿರುವ ಹಳ್ಳಿಗಳಲ್ಲಿ, ಕೊಳವೆ ಬಾವಿ ಕೊರೆದು ನೀರು ಸಿಕ್ಕ ತಕ್ಷಣವೇ ಪಂಪ್ ಹಾಗೂ ಮೋಟಾರ್‌ಗಳನ್ನು ಅಳವಡಿಸುವಂತೆ ಸೂಚಿಸಲಾಗಿದೆ,

ನೀರಿನ ಬವಣೆ ನೀಗಿಸಲು ಎಲ್ಲಾ ಹಂತಗಳ ಅಗತ್ಯತೆಗಳನ್ನು ಒಳಗೊಂಡ ಸಮಗ್ರ ಕ್ರಿಯಾಯೋಜನೆ ಸಿದ್ಧಪಡಿಸಲಾಗುತ್ತಿದೆ ಬೆಳೆ ಹಾನಿಯ ಜಂಟಿ ಸಮೀಕ್ಷೆ ನಡೆಸಿ ವೈಜ್ಞಾನಿಕ ಪರಿಹಾರ ಒದಗಿಸಲು ತೋಟಗಾರಿಕೆ ಮತ್ತು ಕೃಷಿ ಇಲಾಖೆಗಳಿಗೆ ಸೂಚನೆ ನೀಡಲಾಗಿದೆ.



ಜಿಲ್ಲೆಯಲ್ಲಿ ಜಂಟಿ ಸರ್ವೆ ನಡೆಸಿ, ಮಳೆ ಕೊರತೆ, ಬೆಳೆ ಹಾನಿ ಬಗ್ಗೆ ವರದಿ ತಯಾರಿಸಿ, ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ, ಕೇಂದ್ರ ತಂಡ ಬಂದು ಬರ ವೀಕ್ಷಣೆ ಮಾಡಿದ ನಂತರ ಅನುದಾನ ಬರಲಿದೆ, ಆಗಾ ಎಷ್ಟು ಬೆಳೆ ನಷ್ಟದ ಆಧಾರದ ಮೇಲೆ, ರೈತರ ಖಾತೆಗಳಿಗೆ ನೇರವಾಗಿ ಹಣ ಪಾವತಿಯಾಗಲಿದೆ.

ಮಳೆ ಆಶ್ರಿತ ಬೆಳೆಗಳಿಗೆ ಎಕರೆಗೆ 8500 ರೂ. ನೀರಾವರಿ ಆಶ್ರಿತ ಬೆಳೆಗಳಿಗೆ 17000 ರೂ. ದೀರ್ಘಾವಧಿ ಬೆಳೆಗಳಿಗೆ 22500 ರೂ. ದೊರೆಯಲಿದೆ.

**ಭಾನುಪ್ರಕಾಶ್**, ಜಿಲ್ಲಾ ಜಂಟಿ ನಿರ್ದೇಶಕರು ಕೃಷಿ ಇಲಾಖೆ



ಜಿಲ್ಲೆ ಬರಪೀಡಿತ ಎಂದು ಘೋಷಿಸಿದ ತಕ್ಷಣ ಎಲ್ಲಾ ಇಲಾಖೆಗಳ ಸಬೆ ಕರೆದು ತುರ್ತುಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿ ಶ್ರೀರೂಪ ಸಭೆ ನಡೆಸಿದ್ದಾರೆ. ಅದರಲ್ಲೂ ಕುಡಿಯುವ ನೀರ, ಮೇವು ಪೂರೈಕೆಗೆ ಕ್ರಮಕೈಗೊಳ್ಳಲು ಸೂಚನೆ ನೀಡಿದ್ದಾರೆ.

ಈಗಾಗಲೇ ಜಿಲ್ಲಾಡಳಿತದಿಂದ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ,

ಜಿಲ್ಲಾಧಿಕಾರಿಗಳು ಮಂಗಳವಾರವು ಸಭೆ ಕರೆದಿದ್ದು ರಾಜ್ಯ ಸರ್ಕಾರ ನೀಡುವ ಬರಪರಿಹಾರ ಅನುದಾನವನ್ನು ಸಮರ್ಪಕವಾಗಿ ಬಳಸಲು ಕ್ರಮ ಕೈಗೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಕೇಂದ್ರ ತಂಡ ಬರ ವೀಕ್ಷಣೆಗೆ ಬರಲಿದ್ದು, ತಂಡಕ್ಕೆ ಸಮರ್ಪಕ ದಾಖಲೆ ಒದಗಿಸಲು ಜಿಲ್ಲಾಡಳಿತ ಸಿದ್ದತೆ ಕೈಗೊಂಡಿದೆ



ಕೇಂದ್ರ ತಂಡ ಬರುವವರೆಗೆ ರಾಜ್ಯ ಸರ್ಕಾರ ತಕ್ಷಣ ಜಿಲ್ಲಾಡಳಿತದ ಮೂಲಕ ಕುಡಿಯುವ ನೀರು, ಮೇವಿನ ಬವಣೆ ನಿವಾ–ರಿಸಲು ಕ್ರಮಕೈಗೊಳ್ಳಬೇಕು, ಜಂಟಿ ವರದಿ ಅಸ್ಪಷ್ಟತೆಯಿಂದ ಕೂಡಿದೆ, ಮತ್ತೊಮ್ಮೆ ಗ್ರಾ.ಪಂ. ಮಟ್ಟದಲ್ಲಿ ವರದಿ ತಯಾರಿಸಿ ಬೆಳೆ ನಷ್ಟಕ್ಕೆ ವೈಜ್ಞಾನಿಕ ಬೆಳೆ ನೀಡಬೇಕು, ಅಂತರ್ಜಲ ಮಟ್ಟ ಕುಸಿದಿರುವುದರಿಂದ ಬರದ ಅನುದಾನದಲ್ಲಿ ಅಂತರ್ಜಲ ಹೆಚ್ಚಿಸಲು ಕ್ರಮಕೈಗೊಳ್ಳಬೇಕು, ಬರ ನಿರ್ವಹಣೆಯ ಹಣವನ್ನು ಬೇರೆ ಕೆಲಸಕ್ಕೆ ಬಳಸಬಾರದು.

ಈ ಬರ ಪರಿಸ್ಥಿತಿಯಲ್ಲಿ ಹಾಲು ಉತ್ಪಾದಕರಿಗೆ ಲೀಟರ್‌ಗೆ ಹೆಚ್ಚು 5 ರೂ. ಪ್ರೋತ್ಸಾಹಧನ ನೀಡಬೇಕು, ಉತ್ಪಾದಕರಿಗೆ ಮೇವು ಒದಗಿಸಬೇಕು, ತಕ್ಷಣ ಮೇವಿನ ಬ್ಯಾಂಕ್ ತೆರೆಯಬೇಕು ವಿಬಿಜಿ ರಾಮ್ ಜಿ ಯೋಜನೆಯಲ್ಲಿ ಸಮರ್ಪಕವಾಗಿ ಕೂಲಿ ಒದಗಿಸಿ, ಖಾತೆಗೆ ಹಣ ಪಾವತಿಸಬೇಖು,

**ಹಳ್ಳಿಕೆರೆಹುಂಡಿ ಭಾಗ್ಯರಾಜ್,**
ರಾಜ್ಯಾಧ್ಯಕ್ಷರು, ಕಬ್ಬು ಬೆಳೆಗಾರರ ಸಂಘ

# ನಾಳೆ ಉಪಮುಖ್ಯಮಂತ್ರಿಗಳ ಜಿಲ್ಲಾ ಪ್ರವಾಸ : ವಿವಿಧ ತಾಲೂಕುಗಳ ಬರಪೀಡಿತ ಸ್ಥಳಗಳ ಪರಿಶೀಲನೆ



ಚಾಮರಾಜನಗರ, ಆಗಸ್ಟ್ 31 ಉಪ ಮುಖ್ಯಮಂತ್ರಿಗಳಾದ ಡಾ. ಜಿ. ಪರಮೇಶ್ವರ ಅವರು ಸೆಪ್ಟೆಂಬರ್ 2ರಂದು ಚಾಮರಾಜನಗರ ಜಿಲ್ಲಾ ಪ್ರವಾಸ ಕೈಗೊಂಡಿದ್ದು, ಜಿಲ್ಲೆಯ ವಿವಿಧ ತಾಲೂಕುಗಳ ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸುವರು.

ಅಂದು ಬೆಳಿಗ್ಗೆ 10 ಗಂಟೆಯಿಂದಲೇ ಜಿಲ್ಲೆಯ ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು ಹಾಗೂ ಹನೂರು ತಾಲೂಕುಗಳ ಬರಪೀಡಿತ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವರು. ಮಧ್ಯಾಹ್ನ 4.30 ಗಂಟೆಗೆ ಹನೂರಿನ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಬರ ಪರಿಸ್ಥಿತಿ ಬಗ್ಗೆ ಅಧಿಕಾರಿಗಳೊಂದಿಗೆ ಸಭೆ ನಡೆಸುವರು. ಸಂಜೆ 6 ಗಂಟೆಗೆ ಬೆಂಗಳೂರಿಗೆ ತೆರಳುವರು.

# ಚೆಕ್ ಡ್ಯಾಂನಲ್ಲಿ ಈಜಲು ಹೋಗಿ ಯುವಕ ಸಾವು



ಹನೂರು, ಆ. 31, ಬಿಸಿಲಿನ ಝುಳಕ್ಕೆ ಈಜಲು ಹೋಗಿದ್ದ ವ್ಯಕ್ತಿಯೊಬ್ಬರು ಸುಳಿಗೆ ಸಿಲುಕಿ ಮೃತಪಟ್ಟಿರುವ ಘಟನೆ ಹನೂರು ತಾಲ್ಲೂಕಿನ ಬೂದು ಬಾಳು ಗುಂಡಾಪುರ ಬಳಿ ಬರುವ ಚೆಕ್ ಡ್ಯಾಮ್ ನಲ್ಲಿ ಘಟನೆ ಜರುಗಿದೆ...

ಚಾಮರಾಜನಗರ ಜಿಲ್ಲೆಯ ಸಂತೆಮರಹಳ್ಳಿ ಗ್ರಾಮದ ಇಂದ್ರ (17) ನೀರಿನಲ್ಲಿ ಮುಳುಗಿ ಮೃತಪಟ್ಟ ದುರ್ದೈವಿ ಯುವಕನಾಗಿದ್ದಾನೆ. .

ಮೃತ ಯುವಕನ ಸಂಬಂಧಿಕರು ಭಾನುವಾರ ಮಂಗಲ ಗ್ರಾಮದಲ್ಲಿ ಗೃಹಪ್ರವೇಶ ಏರ್ಪಡಿಸಿದ್ದರು. ಭಾನುವಾರ ಗೃಹಪ್ರವೇಶ ಮುಗಿಸಿಕೊಂಡು ಸೋಮವಾರ ಮಧ್ಯಾಹ್ನ ಬೂದು ಬಾಳು ಗ್ರಾಮದ ಬಳಿ ರಾಮನಗುಡ್ಡ ಕೆರೆಗೆ ಪೈಪ್ ಲೈನ್ ಮೂಲಕ ಹೀರೋ ತುಂಬಿಸುವ ಮಾರ್ಗ ಮಧ್ಯದಲ್ಲಿ ಇರುವ ಚೆಕ್ ಡ್ಯಾಮ್ ನೀರು ತುಂಬಿರುವುದು ತಿಳಿದು ಸಂಬಂಧಿಕರ ಜೊತೆ ಈಜಲು ಆಗಮಿಸಿದ್ದಾನೆ ಹೆಚ್ಚು ಆಳ ಇದ್ದಿದ್ದರಿಂದ ಇಂದ್ರ ನೀರಿನಲ್ಲಿ ಮುಳುಗಿದ್ದಾನೆ. ನಂತರ ಜೊತೆಗೆ ಬಂದಿದ್ದ ಸಂಬಂಧಿಕರು ಕೂಗಿಕೊಂಡಾಗ ಅಕ್ಕ ಪಕ್ಕದ ನಿವಾಸಿಗಳು ಘಟನಾ ಸ್ಥಳಕ್ಕೆ ತೆರಳಿ ಘಟನೆಯ ಬಗ್ಗೆ ಹನೂರು ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ.

ಕಾರ್ಯಾಚರಣೆ ನಡೆಸಿ ಶವ ಹೊರತೆಗೆದ ಅಗ್ನಿಶಾಮಕ ದಳದ ಸಿಬ್ಬಂದಿ: ಸಂಬಂಧಿಕರ ಜೊತೆ ಈಜಲು ಹೋಗಿದ್ದ ಇಂದ್ರ ಮಧ್ಯಾಹ್ನ 12 ಗಂಟೆ ವೇಳೆಗೆ ಚೆಕ್ ಡ್ಯಾಮ್ ನೀರಿನಲ್ಲಿ ಈಜಲು ತೆರಳಿ ಮುಳುಗಿ ಮೃತಪಟ್ಟಿದ್ದಾನೆ ಶವ ಮೇಲೆ ಬಾರದಿರುವುದರಿಂದ ಅಗ್ನಿಶಾಮಕ ದಳದ ಸಿಬ್ಬಂದಿಗೆ ತಿಳಿಸಿದ್ದಾರೆ. ತದನಂತರ ಹಲವು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಮೃತ ಪಟ್ಟ ಯುವಕ ಇಂದ್ರನ ಶವವನ್ನು ಮೇಲೆ ಎತ್ತಿದ್ದಾರೆ.

ಈ ಸಂಬಂಧ ಹನೂರು ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದೆ. . .

# ಬೌದ್ಧ ಸಮ್ಮೇಳನ ಯಶಸ್ಸಿಗೆ ಎಲ್ಲರ ಸಹಕಾರ ಅಗತ್ಯ – ಶಾಸಕ ಎ.ಆರ್. ಕೃಷ್ಣಮೂರ್ತಿ

ಹನೂರು, ಆ. 31, ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಅಕ್ಟೋಬರ್‌ನಲ್ಲಿ ನಡೆಯಲಿರುವ ಅಂತರಾಷ್ಟ್ರೀಯ ವಿಶ್ವ ಬೌದ್ಧ ಸಮ್ಮೇಳನದ ಯಶಸ್ಸಿಗೆ ಎಲ್ಲರ ಸಹಕಾರ ಅಗತ್ಯ ಎಂದು ಕೊಳ್ಳೇಗಾಲ ಶಾಸಕ ಹಾಗೂ ಆಚರಣಾ ಸಮಿತಿ ಅಧ್ಯಕ್ಷ ಎ.ಆರ್. ಕೃಷ್ಣಮೂರ್ತಿ ಹೇಳಿದರು.

ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಬುದ್ಧನ ಬೆಳಕಿನ ಸಂದೇಶವನ್ನು ಜಗದಗಲ ಪಸರಿಸುವ ಈ ಸಮ್ಮೇಳನ ಕೇವಲ ಸಮ್ಮೇಳನವಲ್ಲ, ಸಮಾನತೆಯ ಸಂಕಲ್ಪ. ಡಾ. ಬಾಬಾ ಸಾಹೇಬರ ಕನಸಿನಂತೆ ನಡೆಯುವ ಈ ಸಮ್ಮೇಳನವು ನೊಂದ ಸಮುದಾಯದಲ್ಲಿ ಸ್ವಾಭಿಮಾನದ ಕಿಡಿ ಹೊತ್ತಿಸಿ, ಬದುಕಿಗೆ ಹೊಸ ದಾರಿ ತೋರಿಸಲಿದೆ ಎಂದರು.

ಎರಡು ದಿನಗಳ ಈ ಜ್ಞಾನಯಜ್ಞದಲ್ಲಿ ದೇಶ–ವಿದೇಶಗಳಿಂದ ಲಕ್ಷಾಂತರ ಅನುಯಾಯಿಗಳು ಭಾಗವಹಿಸಲಿದ್ದಾರೆ. ಕಳೆದ ವರ್ಷ ಮೈಸೂರಿನಲ್ಲಿ ಮೊದಲ ಸಮ್ಮೇಳನ ಯಶಸ್ಸಿನ ಇತಿಹಾಸ ಬರೆದಿತ್ತು, ಈಗ ಎರಡನೇ ಅಧ್ಯಾಯಕ್ಕೆ ಚಾಮರಾಜನಗರ ಸಜ್ಜಾಗಿದೆ.



ಇದು ಯಾವುದೇ ಒಂದು ಸಮುದಾಯದ ಕಾರ್ಯಕ್ರಮವಲ್ಲ, ಸರ್ವರ ಸಮ್ಮೇಳನ. ಎಲ್ಲ ಜಾತಿ, ಎಲ್ಲ ಸಂಘಟನೆಗಳ ಸಹಯೋಗದಿಂದ ಮಾತ್ರ ಇದು ಯಶಸ್ವಿಯಾಗಲು ಸಾಧ್ಯ ಎಂದರು.

ಸಮ್ಮೇಳನಕ್ಕಾಗಿ 12 ಉಪಸಮಿತಿಗಳನ್ನು ರಚಿಸಲಾಗಿದ್ದು, ಕೋಟ್ಯಂತರ ರೂ. ವೆಚ್ಚದ ಈ ಕಾರ್ಯಕ್ರಮಕ್ಕೆ ಅಂಬೇಡ್ಕರ್ ಅಭಿಮಾನಿಗಳು, ಬೌದ್ಧ ಬಾಂಧವರು ಸ್ವಯಂಪ್ರೇರಿತವಾಗಿ ಆರ್ಥಿಕ ನೆರವು ನೀಡಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಭಂತೆಜಿ ಮನೋರಕ್ಷಿತ್, ಭಂತೆಜಿ ಸುಗತಪಾಲ, ದಸಂಸ ರಾಜ್ಯ ಸಂಚಾಲಕ ದೊಡ್ಡಿಂದುವಾಡಿ ಸಿದ್ದರಾಜು, ಮುಖಂಡರಾದ ಮುಕುಂದ್ ವರ್ಮ, ಮಂಗಲ ಪುಟ್ಟರಾಜು, ಪ್ರಕಾಶ್, ಹನೂರು ಪುಟ್ಟರಾಜು, ಮಣಗಳ್ಳಿ ಸಿ.ಕೆ. ಕೃಷ್ಣಮೂರ್ತಿ, ವೆಂಕಟರಮಣಸ್ವಾಮಿ, ಕೃಷ್ಣಮೂರ್ತಿ, ನಾಗಯ್ಯ, ಬಾಲರಾಜು ಸೇರಿದಂತೆ ಹನೂರು ಭಾಗದ ಪ್ರಮುಖರು ಭಾಗವಹಿಸಿದ್ದರು.

# ನವಜೋಡಿ ಹಾಸ್ಯ ನಟ ಚಿಕ್ಕಣ್ಣ, ಪಾವನ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ



ಗುಂಡ್ಲುಪೇಟೆ, ಆ. 31, ಕಳೆದ ಭಾನುವಾರ ಮೈಸೂರಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ ಹಾಸ್ಯ ನಟ ಚಿಕ್ಕಣ್ಣ ಹಾಗೂ ಪಾವನಾ ನಾಡಿನ ಪ್ರಸಿದ್ಧ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಭೇಟಿ ನೀಡಿದ್ದರು.

ತನ್ನ ಗೆಳೆಯರೊಂದಿಗೆ ಸೋಮವಾರ ಬೆಳಗ್ಗೆ ಗೋಪಾಲಸ್ವಾಮಿ ಬೆಟ್ಟಕ್ಕೆ ಆಗಮಿಸಿದ ಹಾಸ್ಯ ನಟ ಚಿಕ್ಕಣ್ಣ ಹಾಗು ಪಾವನಾ ಗೋಪಾಲನ ದರ್ಶನ ಪಡೆದ ಬಳಿಕ ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕಿದರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಅತೀ ಎತ್ತರದಲ್ಲಿರುವ ನಾಡಿನ ಪ್ರಸಿದ್ಧ ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಸುತ್ತ ಮುತ್ತಲಿನ ಸೌಂದರ್ಯವನ್ನು ನವ ಜೋಡಿಗಳು ಸವಿದರು.

ಈ ಸಮಯದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಕಿರಣ್ ಗೌಡ ಹಾಗೂ ನವೀದ್ ಖಾನ್ ಇದ್ದರು.

# ಎನ್‌ಕೌಂಟರ್ ಪ್ರಕರಣ: ವಿವಿಧ ಆಯಾಮಗಳಲ್ಲಿ ಸಿಐಡಿ ತನಿಖೆ ಚುರುಕು

ಹನೂರು, ಅ. 31, ಕಾವೇರಿ ವನ್ಯಜೀವಿ ಅಭಯಾರಣ್ಯ ವ್ಯಾಪ್ತಿಯ ಹೊಳೆ ಮೂರ್ದಟ್ಟಿ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆ ನಡೆಸಿದ ಶೂಟೌಟ್ ನಿಂದ ಮೂವರು ಬಲಿಯಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಪೊಲೀಸರ ತನಿಖೆ ಚುರುಕುಗೊಂಡಿದೆ.

ಕೊಳ್ಳೇಗಾಲ, ಹನೂರು ಹಾಗೂ ರಾಮಾಪುರ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳು ಸೇರಿದಂತೆ ಅರಣ್ಯ ಇಲಾಖೆಯ ಶೂಟೌಟ್‌ನಲ್ಲಿ ಮೂವರು ಮೃತಪಟ್ಟಿರುವ ಪ್ರಕರಣದ ಬಗ್ಗೆ ಸಿಐಡಿ ಅಧಿಕಾರಿಗಳು ನಿರಂತರವಾಗಿ ಪರಿಶೀಲನೆ ನಡೆಸುತ್ತಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಶಿಲುಬೆಪುರ, ಕೊತ್ತನೂರು ಬೀಟ್‌ನಲ್ಲಿ ದುಷ್ಕರ್ಮಿಗಳು ಕಳ್ಳಬೇಟೆ ಶಿಬಿರಗಳನ್ನು ಬೂದಿಕೆರೆ ನಾಗಬೋಳಿ ಕಳ್ಳ ಬೇಟೆ, ತಡೆ ಶಿಬಿರಗಳ ಮೇಲೆ ಜಿಲೆಟಿನ್ ಸ್ಫೋಟಗಳನ್ನು ಬಳಸಿ ನಾಶಪಡಿಸಿರುವ ಬಗ್ಗೆ ಕೂಲಂಕುಶವಾಗಿ ಪ್ರತಿಯೊಂದು ವರದಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳಿಂದ ಹಾಗೂ ಸಿಬ್ಬಂದಿಗಳಿಂದಲೂ ಸಹ ಸಿಐಡಿ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಮಾಹಿತಿ ಕಲೆಹಾಕುತ್ತಿದ್ದಾರೆ.

ಈಗಾಗಲೇ ಸಿಐಡಿ ಅಧಿಕಾರಿಗಳು 4 ತಂಡಗಳಾಗಿ ವಿಂಗಡಣೆಗೊಂಡು ತನಿಖೆ ನಡೆಸುತ್ತಿದ್ದು, ಅರಣ್ಯ ಇಲಾಖೆಯ ಅಧಿಕಾರಿ ಸಿಬ್ಬಂದಿಗಳಿಂದ ಮೂವರ ಬೇಟೆಗಾರರು ಎಂದು ಶೂಟ್ ಔಟ್ ನಿಂದ ಮೂವರು ಬಲಿಯಾದ ಮರಣೋತ್ತರ ವರದಿ, ಹಾಗೂ ಪೊಲೀಸ್ ಪ್ರಕರಣದ ದಾಖಲೆಗಳು ಹಾಗೂ ಅರಣ್ಯ ಇಲಾಖೆಯ ವರದಿಗಳನ್ನು ಆಧರಿಸಿ ವಿವಿಧ ಆಯಾಮಗಳಲ್ಲಿ ತನಿಖೆಯನ್ನು ನಡೆಸುತ್ತಿದ್ದಾರೆ.

ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ಹೇಳಿಕೆಗಳನ್ನು ಸಿಐಡಿ ಅಧಿಕಾರಿಗಳು ದಾಖಲಿಸಿಕೊಂಡಿದ್ದಾರೆ ಎಂದು ತಿಳಿದು ಬಂದಿದೆ

# ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವ ಅಭಿರುಚಿ ಬೆಳೆಸಿಕೊಳ್ಳಿ : ಪ್ರೊ ಬಿ.ಎಸ್. ಮಹದೇವಸ್ವಾಮಿ

ಚಾಮರಾಜನಗರ, ಆಗಸ್ಟ್ ೩೧ ಸ್ಪರ್ಧೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ, ಸ್ಪರ್ಧೆಯಲ್ಲಿ ಭಾಗವಹಿಸುವಿಕೆಯ ಅಭಿರುಚಿ ಬೆಳೆಸಿಕೊಳ್ಳಬೇಕು ಎಂದು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಬಿ.ಎಸ್. ಮಹದೇವಸ್ವಾಮಿ ಅವರು ತಿಳಿಸಿದರು. ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿಂದು ದೈಹಿಕ ಶಿಕ್ಷಣ ವಿಭಾಗದಿಂದ ಏರ್ಪಡಿಸಿದ್ದ ರಾಷ್ಟ್ರೀಯ ಕ್ರೀಡಾಕೂಟ ದಿನಾಚರಣೆ ಕಾರ್ಯಕ್ರಮವನ್ನು ಚೆಸ್ ಆಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.



ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಅಭಿರುಚಿ ಹೊಂದಬೇಕು.. ರಾಷ್ಟ್ರಮಟ್ಟದ ಖೋ ಖೋ ಪಟು ಕರ್ನಾಟಕದ ಚೈತ್ರ ಸೇರಿದಂತೆ ಹಲವಾರು ಕ್ರೀಡಾಪಟುಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ರಾಜ್ಯಕ್ಕೆ, ದೇಶಕ್ಕೆ ಕೀರ್ತಿ ತಂದಿದ್ದಾರೆ. ಕ್ರೀಡೆಗಳು ವ್ಯಕ್ತಿತ್ವ, ಶಿಸ್ತು ಮತ್ತು ಏಕತೆಯನ್ನು ಬೆಳೆಸುತ್ತವೆ. ಕ್ರೀಡಾ ಕ್ಷೇತ್ರದಲ್ಲಿ ಭಾರತ ದೇಶ ಉತ್ತಮ ಸಾಧನೆ ಮಾಡಿದೆ. ರಾಷ್ಟ್ರೀಯ ಕ್ರೀಡೆ ಹಾಕಿ ಆಟಕ್ಕೂ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಪ್ರೊ. ಬಿ.ಎಸ್. ಮಹದೇವಸ್ವಾಮಿ ಅವರು ತಿಳಿಸಿದರು.

ಚಾಮರಾಜನಗರ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶಕರು ಹಾಗೂ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ಶಾಂತರಾಜು ಅವರು ಮಾತನಾಡಿ ಕ್ರೀಡಾಪಟುಗಳು ಕಠಿಣ ಹಾಗೂ ನಿರಂತರ ಅಭ್ಯಾಸಗಳಿಂದ ಸ್ಪರ್ಧೆಗಳಲ್ಲಿ ಭಾಗವಹಿಸಿದರೆ ಜಯ ಖಚಿತ. ವಿದ್ಯಾರ್ಥಿಗಳಲ್ಲಿ ಶಿಸ್ತು, ಸಮಯಪಾಲನೆ, ಸಹಕಾರ ಮನೋಭಾವನೆ, ಹೊಂದಾಣಿಕೆ ಬೆಳೆಯುವುದರಿಂದ ಕ್ರೀಡೆಯು ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೆ ಮಾರ್ಗಸೂಚಿಯಾಗುತ್ತದೆ ಎಂದರು.

ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ನಡೆದ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಮಾತನಾಡಿದ ವರಮಹಾಲಕ್ಷ್ಮಿ ಸಾಂಸ್ಕೃತಿಕ ಕ್ರೀಡಾ ಸೇವಾ ಸಂಸ್ಥೆಯ ಅಧ್ಯಕ್ಷರು ಹಾಗೂ ಸಿಯುಸಿ ಕ್ರೀಡಾ ಸಮಿತಿ ಸದಸ್ಯರಾದ ಜಿ. ಬಂಗಾರು ಅವರು ನಮ್ಮ ಸಂಸ್ಥೆಯಿಂದ ವಿದ್ಯಾರ್ಥಿನಿಯರು ಮುಖ್ಯವಾಹಿನಿಗೆ ಬರಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಸಂಸ್ಥೆಯಿಂದ ಮುಂದಿನ ದಿನಗಳಲ್ಲಿ ಕ್ರೀಡಾ ಸಾಮಗ್ರಿಯನ್ನು ವಿತರಣೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಧ್ಯಾಪಕರಾದ ಸಿ. ಶೈಲೇಶ್ ಕುಮಾರ್, ಪಿ. ರೂಪದೇವಿ, ಡಾ. ಆರ್. ಪ್ರಸಾದ್, ಎಂ.ಸಿ ಪರಮೇಶ್, ಐಕ್ಯೂಎಸಿ ಸಂಚಾಲಕರಾದ ಡಾ. ಲಿಖಿತ ಎಸ್ ಅನುರಾಧ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಗುಡಿ ಕೈಗಾರಿಕೆ, ಗ್ರಾಮೀಣ ಕುಶಲಕರ್ಮಿಗಳಿಂದ ವಿವಿಧ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಚಾಮರಾಜನಗರ, ಆಗಸ್ಟ್ ೨೯ ಜಿಲ್ಲೆಯ ಗ್ರಾಮಾಂತರ ಪ್ರದೇಶದ ವೃತ್ತಿನಿರತ ಗ್ರಾಮೀಣ ಕುಶಲಕರ್ಮಿ, ಗುಡಿ ಕೈಗಾರಿಕೆಯಲ್ಲಿ ತೊಡಗಿರುವ ಕುಶಲಕರ್ಮಿಗಳಿಂದ ೨೦೨೬-೨೭ನೇ ಸಾಲಿನಲ್ಲಿ ಗ್ರಾಮೀಣ ಕೈಗಾರಿಕೆ ಇಲಾಖೆಯ ವಿವಿಧ ಸೌಲಭ್ಯ ಪಡೆಯಲು ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣಗಳ ಸರಬರಾಜು, ವಿಶೇ? ಘಟಕ ಮತ್ತು ಗಿರಿಜನ ಉಪಯೋಜನೆ ಕಾರ್ಯಕ್ರಮದಡಿ ಪೆಡ್ಲಿಂಗ್ ಹೊಲಿಗೆಯಂತ್ರ ವಿತ್ ಮೋಟಾರ್ ಮತ್ತು ಪವರ್‌ಟೂಲ್ಸ್‌ಗಳಾದ ಮರಗೆಲಸ, ಗಾರೆಕೆಲಸ, ದೋಬಿ, ಕ್ಷೌರಿಕ ಸುಧಾರಿತ ಉಪಕರಣಗಳನ್ನು ಪಡೆಯಲು ಗ್ರಾಮೀಣ ಪ್ರದೇಶದವರು ಮಾತ್ರ ಅರ್ಜಿ ಸಲ್ಲಿಸಬಹುದು. ಅರ್ಜಿಯೊಂದಿಗೆ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ, ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಹೊಲಿಗೆ ತರಬೇತಿ ಪಡೆದ ಪ್ರಮಾಣ ಪತ್ರ, ಬಿ.ಪಿ.ಎಲ್ ಪಡಿತರ ಚೀಟಿ, ವಿಕಲಚೇತನರಿದ್ದಲ್ಲಿ ಹ್ಯಾಂಡಿಕ್ಯಾಪ್ಡ್ ಸರ್ಟಿಫಿಕೇಟ್, ಕಸುಬು ನಿರ್ವಹಿಸುತ್ತಿರುವ ಬಗ್ಗೆ ಹಾಗೂ ಈ ಹಿಂದೆ ಸರ್ಕಾರಿ ಯೋಜನೆಗಳಲ್ಲಿ ಸೌಲಭ್ಯ ಪಡೆಯದ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರಗಳ ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕು. ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ವೆಬ್ ಸೈಟ್ ೪ಣಣಠಿ://ಛಿಚಿಟಡಿಚಿ-ರಿಟಚಿರಚಿಡಿ.ಟುಭಿ.ಟಿ ನಲ್ಲಿ ಸೆಪ್ಟೆಂಬರ್ ೧ ರಿಂದ ೩೦ರೊಳಗೆ ಅಪ್ ಲೋಡ್ ಮಾಡಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನದ ೨ನೇ ಮಹಡಿಯಲ್ಲಿರುವ ಗ್ರಾಮೀಣ ಕೈಗಾರಿಕೆ ಇಲಾಖೆ ಉಪನಿರ್ದೇಶಕರ ಕಚೇರಿಯ ತಾಲ್ಲೂಕು ಕೈಗಾರಿಕಾ ವಿಸ್ತರಣಾಧಿಕಾರಿಗಳನ್ನು (ಕೊಠಡಿ ಸಂ: ೨೨೪) ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ ೨೦೨೫-೨೬ ನೇ ಸಾಲಿನಲ್ಲಿ ೪.೦೩ ಲಕ್ಷ ನಿವ್ವಳ ಲಾಭ



ಕೊಳ್ಳೇಗಾಲ ಅ ೩೧ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ ೨೦೨೫-೨೬ ನೇ ಸಾಲಿನಲ್ಲಿ ೪.೦೩ ಲಕ್ಷ ನಿವ್ವಳ ಲಾಭ ಬಂದಿದೆ ಎಂದು ಸಂಘದ ಅಧ್ಯಕ್ಷ ಎಂ.ಗೋವಿಂದರಾಜು ಹೇಳಿದರು.
ಪಟ್ಟಣದ ವೆಂಕಟೇಶ್ವರ ಮಹಲ್‌ನಲ್ಲಿ ನಡೆದ ಟಿಎಪಿಸಿಎಂಎಸ್ ಡಳಿತ ಮಂಡಳಿ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.
ಸಂಘದ ಆಡಳಿತ ಮಂಡಳಿ, ನೌಕರರ ವರ್ಗದವರ ಸಹಕಾರದಿಂದ ಸಂಘವನ್ನು ಮುನ್ನಡೆಸಲು ಹಾಗೂ ಸಂಘದ ಅಭಿವೃದ್ಧಿಗೆ ಸರ್ವತೋಮುಖವಾಗಿ ಭಿವೃದ್ಧಿಗೊಳಿಸಿ ಉತ್ತಮ ಸ್ಥಿತಿಗೆ ತರಲು ಕಾರಣವಾಗಿದೆ. ಮುಂದಿನ ಹೆಚ್ಚಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಸರಕಾರದಿಂದ ಬರಬೇಕಾಗಿದ್ದ ಸಹಾಯಧನದ ಬಾಬ್ತು ರೂ.೧,೮೪,೭೬,೮೮೨.೦೦ ಗಳು ಬಂದಿದ್ದು, ಸದರಿ ಹಣವನ್ನು ನಾಫೇಡ್ ಸಂಸ್ಥೆಯವರಿಗೆ ಪಾವತಿಸಿದ್ದು ಇನ್ನೂ ಬಾಕಿಯಿರುವ ಸಹಾಯಧನದ ಬಿಲ್ಲಿನ ಮೊಬಲಗನ್ನು ಸಂಘಕ್ಕೆ ಜಮಾ ಆಗಲು ಈಗಾಗಲೇ ಸಂಬಂಧಪಟ್ಟ ಇಲಾಖೆಯೊಂದಿಗೆ ಚರ್ಚಿಸಿದ್ದು ಸಹಾಯಧನದ ಬಿಲ್ಲು ಸಂಘಕ್ಕೆ ಜಮಾ ಆದ ತಕ್ಷಣ ನಾಫೇಡ್ ಸಂಸ್ಥೆಗೆ ನೀಡಿ ಮತ್ತೆ ಪಡಿತರ ಆಹಾರಧಾನ್ಯ ವಿತರಣೆಗೆ ಕ್ರಮವಹಿಸುತ್ತೇವೆ. ಈಗಾಗಲೇ ಹನೂರು ಭಾಗದಲ್ಲಿ ೦.೭೦ ಸೆಂಟ್ ಜಮೀನನ್ನು ಸರಕಾರದಿಂದ ಮಂಜೂರು ಮಾಡಿಸಿಕೊಂಡಿದ್ದು ಸಂಘದ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಹೊತ್ತು ನೀಡಲಾಗುವುದು. ೨೦೨೫-೨೬ನೇ ಸಾಲಿನಲ್ಲಿ ರೂ.೪,೦೩,೫೫೬.೦೮ ಗಳ ನಿವ್ವಳ ಲಾಭ ಬಂದಿದ್ದೂ ಇನ್ನೂ ಹೆಚ್ಚಿನ ಲಾಭಗಳಿಸಲು ನಿಮ್ಮೆಲ್ಲರ ಸಹಕಾರ ಅತ್ಯಮೂಲ್ಯ ಎಂದರು.
ಪ್ರಭಾರ ಕಾರ್ಯದರ್ಶಿ ಟಿ.ಲಿಂಗರಾಜು ವಾರ್ಷಿಕ ವರದಿ ಮಂಡಿಸಿದರು, ಈ ಸಭೆಯಲ್ಲಿ ಸಂಘದ ಉಪಾಧ್ಯಕ್ಷರು ಕೆ.ರಾಜುಗೋಪಾಲ, ನಿರ್ದೇಶಕರು ಎನ್. ಚಾಮರಾಜು, ಎಸ್.ಮುರುಡೇಶ್ವರ ಸ್ವಾಮಿ, ಎಸ್.ಎಂ.ಜಗದೀಶ್ ನಾಯ್ಕ, ಎಂ.ಜಗದೀಶ್, ರೇಚಪ್ಪ, ಎಂ.ಮುತ್ತುರಾಮ, ಸಿ.ಎಲ್ಲಪ್ಪನ್, ವಿ.ಉತ್ತಮ್ಮ, ವತ್ಸಲ ಸಿದ್ದರಾಜು, ಮಹದೇವಸ್ವಾಮಿ ಮುಂತಾದವರಿದ್ದರು. ಹಾಗೂ ಸದಸ್ಯರು ಇದ್ದರು.

# ಸಹಕಾರ ಕ್ಷೇತ್ರದ ಬೆಳವಣಿಗೆಯಿಂದ ಹಳ್ಳಿಗಳ ಅಭಿವೃದ್ದಿ : ಎಚ್.ಎಸ್. ನಂಜುಂಡಪ್ರಸಾದ್

## ಜಿಲ್ಲಾ ಮಟ್ಟದ ಪ್ರೌಢಶಾಲಾ ಮತ್ತು ಪಿಯು ವಿದ್ಯಾರ್ಥಿಗಳಿಗೆ ಪ್ರಬಂಧ ಹಾಗು ಚರ್ಚಾ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ

ಚಾಮರಾಜನಗರ, ಆ. ೩೧ ಸಹಕಾರ ಕ್ಷೇತ್ರ ಬಹಳ ವಿಸ್ತಾರವಾಗಿ ಬೆಳೆದಿದ್ದು, ಹಳ್ಳಿಗಳ ಅಭಿವೃದ್ದಿಯಲ್ಲಿ ಸಹಕಾರ ಕ್ಷೇತ್ರ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರು ಅದ ಚಾಮುಲ್ ನಿರ್ದೇಶಕ ಎಚ್.ಎಸ್. ನಂಜುಂಡಪ್ರಸಾದ್ ತಿಳಿಸಿದರು.
ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಜ್ಯ ಸಹಕಾರ ಮಹಾಮಂಡಲ, ಚಾಮರಾಜನಗರ ಜಿಲ್ಲಾ ಸಹಕಾರ ಯೂನಿಯನ್, ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಕಾರ ಇಲಾಖೆಯ ಸಹಯೋಗದಲ್ಲಿ ನಡೆದ ಜಿಲ್ಲಾ ಮಟ್ಟದ ಪ್ರೌಢಶಾಲಾ ಮತ್ತು ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಪ್ರಬಂಧ ಹಾಗು ಚರ್ಚಾ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.
ನಮ್ಮ ದೇಶ ಹಳ್ಳಿಗಳಿಂದ ಕೂಡಿದ ರೈತಾಪಿ ವರ್ಗವನ್ನು ಹೊಂದಿರುವ ದೊಡ್ಡ ರಾಷ್ಟ್ರ. ರೈತರೇ ಈ ದೇಶದ ಬೆನ್ನೆಲುಬು. ಸರ್ಕಾರಗಳು ಮಾಡದಂತಹ ಕೆಲಸವನ್ನು ಸಹಕಾರಿ ಕ್ಷೇತ್ರಗಳಲ್ಲಿ ನಮ್ಮ ಹಿರಿಯರು ಮತ್ತು ಸಹಕಾರಿ ದುರೀಣರು ಮಾಡಿ ತೋರಿಸಿದ್ದಾರೆ. ಸಹಕಾರ ಕ್ಷೇತ್ರ ಬೆಳೆದದಷ್ಟು ಈ ಪ್ರದೇಶದ ಜನರು, ಆ ವೃತ್ತಿಯಲ್ಲಿರುವವರ ಆರ್ಥಿಕ ಅಭಿವೃದ್ದಿ ಹೊಂದುತ್ತಾರೆ. ಇದಕ್ಕೆ ಉತ್ತಮ ನಿದರ್ಶನ ನಮ್ಮ ಸಹಕಾರ ಹಾಲು ಮಹಾಮಂಡಲ ನಮ್ಮ ಕಣ್ಮುಂದೆ ಇದೆ ಎಂದರು.
ಹೀಗಾಗಿ ವಿದ್ಯಾರ್ಥಿ ದೆಸೆಯಿಂದಲೇ ಸಹಕಾರ ಕ್ಷೇತ್ರದ ಬಗ್ಗೆ ಒಲವು ಹೊಂದಬೇಕು. ಸಹಕಾರ ಸಂಘ ಇಲ್ಲದ ಗ್ರಾಮವನ್ನು ನೋಡುವುದೇ ಕಷ್ಟವಾಗಿದೆ. ಸಣ್ಣ ಹಳ್ಳಿ ಇದ್ದರು ಅಲ್ಲಿ ಒಂದು ಸಂಘವನ್ನು ನೋಡುತ್ತಿದೆ. ದೇವಸ್ಥಾನ, ಶಾಲೆ ಬಿಟ್ಟರೆ ಇನ್ನು ಸಹಕಾರ ಸಂಘಗಳು ನಮ್ಮೆಲ್ಲರ ಪ್ರಗತಿಗೆ ದುಡಿಯುತ್ತಿವೆ. ಇಂದಿನ ಚರ್ಚೆ



ಸ್ಪರ್ಧೆ ಹಾಗು ಪ್ರಬಂಧ ಸ್ಪರ್ಧೆಯಲ್ಲಿ ಜಿಲ್ಲೆಯ ನಾನಾ ತಾಲೂಕಿನಿಂದ ವಿದ್ಯಾರ್ಥಿಗಳು ಬಹಳ ಉತ್ಸಾಹ ದಿಂದ ಬಂದಿದ್ದೀರಿ. ನಿಮ್ಮೆಲ್ಲರ ಭವಿಷ್ಯ ಉಜ್ವಲವಾಗಲಿ. ಗೆದ್ದವರು ಬೀಗದೇ ಸೋತವರು ಕುಗ್ಗದೇ ಮುನ್ನಡೆಯಿರಿ, ಸಹಕಾರ ಕ್ಷೇತ್ರದ ಬಗ್ಗೆ ಇನ್ನು ಹೆಚ್ಚಿನ ಜ್ಞಾನವನ್ನು ಬೆಳೆಸಿಕೊಳ್ಳಿ ಎಂದು ನಂಜುಂಡಪ್ರಸಾದ್ ಸಲಹೆ ನೀಡಿದರು.
ನಿರ್ದೇಶಕರಾದ ಎಚ್.ಎಂ. ಬಸವಣ್ಣ, ಮುದ್ದಯ್ಯ ಮಾತನಾಡಿ, ಇಲ್ಲಿ ಗೆದ್ದಿರುವವರು ರಾಜ್ಯದ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದೀರಿ. ಇನ್ನು ಹೆಚ್ಚಿನ ಜ್ಞಾನವನ್ನು ಪಡೆದುಕೊಂಡು ಜಿಲ್ಲೆಯ ಕೀರ್ತಿ ಪಾತೆಕೆಯನ್ನು ಹಾರಿಸಬೇಕು. ಬಡವರು ಹಾಗು ಸಮಾಜ ಸೇವೆ ಮಾಡಲು ಸಹಕಾರ ಕ್ಷೇತ್ರ ಉತ್ತಮ ಮಾರ್ಗವಾಗಿದೆ. ಪ್ರತಿ ಹಂತದಲ್ಲಿಯು ರೈತರೊಂದಿಗೆ ನೇರ ಭಾಗಿಯಾಗಲು ಸಾಧ್ಯವಿದೆ. ಸಹಕಾರ ಎಂದರೆ ಪರಸ್ಪರ ಎಲ್ಲರೊಂದಿಗೆ ಎಂಬಂತೆ ಕಾಯ್ದೆ ಬಗ್ಗೆ ತಿಳಿದುಕೊಂಡು ಸಹಕಾರಿ ಕ್ಷೇತ್ರವನ್ನು ಮುನ್ನಡೆಸುವ ನಾವಿಕರಾಗಬೇಕು ಎಂದರು.
ಪ್ರಬಂಧ ಸ್ಪರ್ಧೆ : (ಪ್ರೌಢಶಾಲೆ ವಿದ್ಯಾರ್ಥಿಗಳಿಗೆ) ಹನೂರು ತಾ.ನ ರಾಮಾಪುರ ಸರ್ಕಾರಿ ಪ್ರೌಢಶಾಲೆಯ ಕೆ. ಪವಿತ್ರ(ಪ್ರಥಮ) ಚಾ.ನಗರ ತಾ.ನ ಹರದನಹಳ್ಳಿ ಪಬ್ಲಿಕ್ ಶಾಲೆಯ ಕೆ. ಹೇಮ(ದ್ವಿತಿಯ) ಯಳಂದೂರು ತಾ.ನ ಮಲ್ಲಹಳ್ಳಿ ಅದರ್ಶ ವಿದ್ಯಾಲಯದ ಸಿ. ರಶ್ಮಿತಾ ( ತೃತೀಯ) ಸ್ಥಾನಗಳನ್ನು ಪಡೆದುಕೊಂಡರು.
ಚರ್ಚಾ ಸ್ಪರ್ಧೆ: (ಪಿಯು ಕಾಲೇಜು ವಿದ್ಯಾರ್ಥಿಗಳಿಗೆ) ಚಾ.ನಗೆ ಜೆ-ಎಸ್‌ಎಸ್ ಪಿಯು ಕಾಲೇಜಿನ ಜೆ. ಯಶಸ್ವಿನಿ ( ಪ್ರಥಮ ) ಗುಂಡ್ಲುಪೇಟೆ ದೊಡ್ಡಹುಂಡಿ ಪಿಯು. ಕಾಲೇಜಿನ ಎಂ. ಮಣಿಕಂಠ (ದ್ವಿತಿಯ) ಹಾಗೂ ಚಾ.ನಗರ ಪದವಿ ಪೂರ್ವ ಬಾಲಕಿಯರ ಕಾಲೇಜಿನ ಐಶ್ವರ್ಯ (ತೃತೀಯ ) ಬಹುಮಾನವನ್ನು ಪಡೆದುಕೊಂಡರು. ಈ ಆರು ಮಂದಿಗೆ ಪ್ರಶಸ್ತಿ ಪತ್ರ, ಪಾರಿತೋಷಕ ಹಾಗೂ ನಗದು ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು.
ಕಾರ್ಯಕ್ರಮದಲ್ಲಿ ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಎಂ.ಎಂ. ಪ್ರಭುಸ್ವಾಮಿ, ತೀರ್ಪುಗಾರರಾಗಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ.ಮಲ್ಲೇಶ್, ಮೈಸೂರಿನ ಕೆ.ಐ.ಸಿ.ಎಂ. ಪ್ರಾಂಶುಪಾಲೆ ಪಿ. ಗೀತಾ, ಜಿಲ್ಲಾ ಸಹಕಾರ ಯೂನಿಯನ್ ಸಿಇಓ ಮನುಜ, ಮ್ಯಾನೇಜರ್ ಮಲ್ಲಿಕಾರ್ಜುನ್, ನೌಕರರಾದ ಮಲ್ಲೇಶ್, ಕೆಂಡಗಣ್ಣಸ್ವಾಮಿ ಜಿಲ್ಲೆಯ ವಿವಿಧ ಶಾಲಾ ಕಾಲೇಜುಗಳಿಂದ ಉಪನ್ಯಾಸಕರು, ಶಿಕ್ಷಕರು ಹಾಗು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಸೆಪ್ಟಂಬರ್ ೩, ಗುರುವಾರ ವಿದೂಷಿ ಕಾವ್ಯಶ್ರೀ ಆರ್‌ರಾವ್‌ಅವ-ರಿಂದದಾಸವಾಣಿ ಭಕ್ತಿ ಗೀತೆಗಳ ಗಾಯನ



ಮೈಸೂರಿನ ನಾರಾಯಣಶಾಸ್ತ್ರೀ ರ ಸ್ತೆ ೦ ು ಲ್ಲಿ ರ ು ವ ಸುಬ್ಬರಾಯನಕೆರೆ ಶ್ರೀ ರಾಘವೇಂದ್ರ ಸ್ವಾಮಿಗಳ ವ ು ಠ ದ ಆ ವ ರ ಣ ದ ಲ್ಲಿ ದಿನಾಂಕ:೦೩/೦೯/೨೦೨೬ ರಂದುಗುರುವಾರ ಸಂಜೆ ೫:೩೦ ಕ್ಕೆ ವಿದೂಷಿ ಕಾವ್ಯ ಶ್ರೀ ಆರ್‌ರಾವ್‌ಅವ-ರಿಂದದಾಸವಾಣಿ ಭಕ್ತಿ ಗೀತೆಗಳ ಗಾಯನಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ

# ಸಂಸದ ಸುನೀಲ್ ಬೋಸ್ ಹುಟ್ಟುಹಬ್ಬ: ಅಹಿಂದ ಸಂಘಟನೆಯಿಂದ ಚಾಮರಾಜೇಶ್ವರನಿಗೆ ವಿಶೇಷ ಪೂಜೆ

ಚಾಮರಾಜನಗರ ಆ. ೩೧ ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದರಾದ ಸುನೀಲ್ ಬೋಸ್ ಅವರ ಹುಟ್ಟುಹಬ್ಬದ ಅಂಗವಾಗಿ ಅಹಿಂದ ಸಂಘಟನೆ ವತಿಯಿಂದ. ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಲಾಯಿತು.
ಅಹಿಂದ ಸಂಘಟನೆ ಯುವ ಘಟಕದ ರಾಜ್ಯಾಧ್ಯಕ್ಷ ಹಳೇಪುರ ಎಂ.ಮಹೇಶ್ ಅವರ ನೇತೃತ್ವದಲ್ಲಿ ದೇವಸ್ಥಾನದಲ್ಲಿ ಸುನೀಲ್ ಬೋಸ್ ಹೆಸರಿನಲ್ಲಿ ಅರ್ಚನೆ, ಅಭಿಷೇಕ ಮಾಡಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು.ಅಹಿಂದ ಸಂಘಟನೆ ಯುವ ಘಟಕದ ರಾಜ್ಯಾಧ್ಯಕ್ಷ ಹಳೇಪುರ ಎಂ.ಮಹೇಶ್ ಮಾತನಾಡಿ, ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದರಾದ ಸುನೀಲ್ ಬೋಸ್ ಅವರ ಹುಟ್ಟುಹಬ್ಬದ ಅಂಗವಾಗಿ ಅಹಿಂದ ಸಂಘಟನೆ ವತಿಯಿಂದನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದಲ್ಲಿ



ವಿಶೇಷ ಪೂಜೆ ಸಲ್ಲಿಲಾಗಿದೆ.ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದು.ಕ್ಷೇತ್ರದ ವ್ಯಾಪ್ತಿಯ ಹಾಡಿಗಳಿಗೆ ಭೂಗತ ಕೇಬಲ್ ಮೂಲಕ ವಿದ್ಯುತ್ ವ್ಯವಸ್ಥೆ ಕಲ್ಪಿಸಿಕೊಟ್ಟಿದ್ದಾರೆ.ರಾಜ್ಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವ ಅವಶ್ಯಕತೆಯ ಕುರಿತು ಸಂಬಂಧಿಸಿದ ಸಚಿವರಿಗೆ ಮನವಿ ಸಲ್ಲಿಸಿದ್ದಾರೆ. ಜಿಲ್ಲೆಯನ್ನು ರಾಷ್ಟ್ರೀಯ ಅರಿಶಿನ ಮಂಡಳಿ ವ್ಯಾಪ್ತಿಗೆ ಸೇರಿಸುವ ಅಗತ್ಯತೆಯನ್ನು ಮನವರಿಕೆ ಮಾಡಲು ಕೇಂದ್ರ ಸಚಿವರನ್ನು ಭೇಟಿ ಮಾಡಿದ್ದಾರೆ. ಮಂಜೂರಾಗಿದ್ದರೂ ಆರಂಭವಾಗದಿದ್ದ ಚಾಮರಾಜನಗರ ಸರ್ಕಾರಿ ಕಾನೂನು ಕಾಲೇಜಿಗೆ 'ಬಾರ್ ಕೌನ್ಸಿಲ್ ಆಫ್ ಇಂಡಿಯಾ'ದಿಂದ ಅನುಮೋದನೆ ಕೊಡಿಸಿ, ತರಗತಿಗಳು ಪ್ರಾರಂಭವಾಗುವಂತೆ ಮಾಡಿದ್ದಾರೆ . ಕ್ಷೇತ್ರವನ್ನು ಮಾದರಿ ಮಾಡಲು ಯೋಜನೆಗಳ ಹಾಕಿಕೊಂಡಿದ್ದಾರೆ. ಅವರಿಗೆ ಭಗವಂತ ಹೆಚ್ಚಿನ ಆರೋಗ್ಯ, ಆಯಸ್ಸು , ಹೆಚ್ಚಿನ ಅಧಿಕಾರಿ ಕರುಣಿಸಲಿ ಎಂದು ಆಶಿಸಿದರು. ಈ ಸಂದರ್ಭದಲ್ಲಿ ಅಹಿಂದ ಸಂಘಟನೆಯ ಕಾರ್ಮಿಕ ಘಟಕದ ಜಿಲ್ಲಾಧ್ಯಕ್ಷ ನಾಗೇಶ್ ಚಿಜಲ, ಶ್ರೀನಿವಾಸ ಗಣಿಗನೂರು, ಪುನೀತ್ ಕುಮಾರ್, ಮಹಾದೇವಸ್ವಾಮಿ, ಮಧುರೇಚಂಬಳ್ಳಿ, ಸಿದ್ದುಕೋಟಂಬಳ್ಳಿ ,ಆನಂತ್ ಇತರರು ಹಾಜರಿದ್ದರು.

# ಉದ್ಯಾನವನದ ೫% ಭೂಮಿ ಪರಭಾರೆಗೆ ವಿರೋಧ; ಲಾಲ್‌ಬಾಗ್ ನಲ್ಲಿ ಜನಾಂದೋಲನ; ಉದ್ಯಾನ ರಕ್ಷಣೆ ಅಪರಾಧವಾದರೆ ಪ್ರತಿದಿನ ಅಪರಾಧ ಮಾಡ್ತೇನೆ- ತೇಜಸ್ವಿ ಸೂರ್ಯ

# ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣರಿಂದ ರೈಲು ನಿಲ್ದಾಣ ಅಭಿವೃದ್ಧಿ ಕಾಮಗಾರಿ ಪರಿಶೀಲನೆ

ಚಾಮರಾಜನಗರ, ಆಗಸ್ಟ್ 31, ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರಾದ ವಿ. ಸೋಮಣ್ಣ ಅವರು ಚಾಮರಾಜನಗರ ರೈಲು ನಿಲ್ದಾಣಕ್ಕೆ ಭೇಟಿ ನೀಡಿ ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿ 22.31 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿರುವ ರೈಲು ನಿಲ್ದಾಣ ಕಾಮಗಾರಿಯನ್ನು ಪರಿಶೀಲಿಸಿದರು.

ಹೊಸ ನಿಲ್ದಾಣ ಕಟ್ಟಡ, ಅಗಲೀಕರಣ ಮಾಡುತ್ತಿರುವ ಫ್ಲಾಟ್ ಫಾರಂ, ಶೆಲ್ಟರ್, ಪ್ರಯಾಣಿಕರ ಸಂಚಾರಕ್ಕೆ ನಿರ್ಮಿಸಲಾಗುತ್ತಿರುವ ಪಾದಚಾರಿ ಮೇಲ್ಸೇತುವೆ, ಲಿಫ್ಟ್ ಗಳು, ಎಸ್ಕಲೇಟರ್ ಕಾಮಗಾರಿಗಳನ್ನು ವೀಕ್ಷಿಸಿದರು.

ಪುರುಷರು ಹಾಗೂ ಮಹಿಳೆಯರಿಗಾಗಿ ಪ್ರತ್ಯೇಕವಾಗಿ ನಿರ್ಮಿಸಲಾಗಿರುವ ನಿರೀಕ್ಷಣಾ ಕೊಠಡಿ, ಉಪಹಾರ ಮಂದಿರವನ್ನು ವೀಕ್ಷಣೆ ಮಾಡಿದರು. ನಿಲ್ದಾಣದ ಸುತ್ತಮುತ್ತಲಿನ ಪ್ರದೇಶ, ಪಾರ್ಕಿಂಗ್ ಸ್ಥಳ, ಸುಧಾರಿತ ಪ್ರದೇಶ ಸೌಲಭ್ಯ ಸೇರಿದಂತೆ ಪ್ರಗತಿಯಲ್ಲಿರುವ ವಿವಿಧ ಕಾಮಗಾರಿಯನ್ನು ಸಚಿವರು ಪರಿಶೀಲಿಸಿದರು.

ಹಾಲಿ ಇರುವ ಟಿಕೆಟ್ ಕೌಂಟರ್ ಬಳಿ ತೆರಳಿ ಅಲ್ಲಿಯೂ ವೀಕ್ಷಣೆ ಮಾಡಿ ಪ್ರಯಾಣಿಕರಿಗೆ ಶೀಘ್ರವಾಗಿ ಟಿಕೆಟ್ ವಿತರಿಸಲು ಅನುಕೂಲವಾಗುವಂತೆ ವ್ಯವಸ್ಥೆಗಳನ್ನು ಕಲ್ಪಿಸಲು ಸೂಚಿಸಿದರು. ಇದೇ ವೇಳೆ ರೈಲ್ವೆ ಸೌಲಭ್ಯಗಳ ಬಗ್ಗೆ ಪ್ರಯಾಣಿಕರಿಂದಲೂ ಅಹವಾಲುಗಳನ್ನು ಆಲಿಸಿದರು.

ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಸಚಿವರಾದ ವಿ. ಸೋಮಣ್ಣ ಅವರು ಇಡೀ ರಾಜ್ಯದಲ್ಲಿ ರೈಲ್ವೆ ಮೇಲ್ಸೇತುವೆ, ಕೆಳ ಸೇತುವೆ ಸೇರಿದಂತೆ ನೆನೆಗುದಿಗೆ ಬಿದ್ದಿದ್ದ ಹಲವು ಕಾಮಗಾರಿಗಳನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸುತ್ತಿದ್ದೇವೆ. ಪ್ರಧಾನಿಯವರು ತಂದಿರುವ ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿ



ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳು ಹಾಗೂ ಪ್ರಮುಖ ತಾಲೂಕುಗಳು, ರಾಜಧಾನಿಯಲ್ಲಿರುವ ರೈಲು ನಿಲ್ದಾಣವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಇದರಲ್ಲಿ ಚಾಮರಾಜನಗರ ರೈಲು ನಿಲ್ದಾಣದಲ್ಲಿಯೂ ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಸೆಪ್ಟೆಂಬರ್ 26ರೊಳಗೆ ಕಾಮಗಾರಿ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡಲಿದ್ದೇವೆ ಎಂದರು.

ಮೈಸೂರು ಜಿಲ್ಲೆ ಹಾಗೂ ಚಾಮರಾಜನಗರ ಭಾಗದಲ್ಲಿ ಮೇಲ್ಸೇತುವೆ, ಕೆಳ ಸೇತುವೆ, ಎಲ್.ಸಿ ಗೇಟ್ ಗಳ ನಿರ್ಮಾಣಕ್ಕೆ ಅಂದಾಜು ಪಟ್ಟಿಯಾಗಿದೆ. ಅಧಿಕಾರಿಗಳೊಂದಿಗೆ ಈಗಾಗಲೇ ವೀಕ್ಷಿಸಿ ಚರ್ಚಿಸಲಾಗಿದೆ. ಇನ್ನು 15 ದಿನದೊಳಗೆ ಯೋಜನೆ ಯಾವ ಯಾವ ಹಂತದಲ್ಲಿದೆ ಎಂಬುದನ್ನು ಪರಿಶೀಲಿಸಿ ಇನ್ನೂ 2 ವರ್ಷದಲ್ಲಿ ಎಲ್ಲವನ್ನು ಪೂರ್ಣಗೊಳಿಸುವ ಸಂಕಲ್ಪ ಮಾಡಲಾಗಿದೆ ಎಂದು ಸಚಿವರಾದ ವಿ. ಸೋಮಣ್ಣ ಅವರು ತಿಳಿಸಿದರು.

ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ಮುದಿಪ್ ಮಿತ್ತಲ್, ಮುಖ್ಯ ಯೋಜನಾ ವ್ಯವಸ್ಥಾಪಕರಾದ ಗತಿಶಕ್ತಿ, ಮುಖ್ಯ ಯೋಜನಾ ವ್ಯವಸ್ಥಾಪಕರಾದ ಆನಂದ ಭಾರತಿ ಹಾಗೂ ಇಲಾಖೆಯ ವಿಭಾಗೀಯ ಅಧಿಕಾರಿಗಳು ಈ ಸಂದರ್ಭದಲ್ಲಿ ಇದ್ದರು.

# ಕೆಂಪನಂಜಾಂಬ ಉತ್ಸವ ಮೂರ್ತಿಗೆ ಸ್ವರ್ಣ ಲೇಪಿತ ಕವಚ ಅರ್ಪಣೆ



ಚಾಮರಾಜನಗರ, ಆ. 31, ನಗರದ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿರುವ ಕೆಂಪನಂಜಾಂಬ ಉತ್ಸವಮೂರ್ತಿಗೆ ಸ್ವರ್ಣ ಲೇಪಿತ ಕವಚ ಹಾಗೂ ಮಂಟಪಕ್ಕೆ ರಜತ ಲೇಪಿತ ಕವಚವನ್ನು ಅರ್ಪಿಸಲಾಯಿತು,

ಎಚ್ ವಿ ಶ್ರೀಕಂಠ ಸ್ವಾಮಿಯವರು 6 ಲಕ್ಷರೂ. ವೆಚ್ಚದಲ್ಲಿ ಮಾಡಿಸಿಕೊಟ್ಟಿದ್ದು ಇದನ್ನು ಜಿಲ್ಲಾಉಸ್ತುವಾರಿ ಸಚಿವ ಪುಟ್ಟರಂಗಶೆಟ್ಟಿರವರ ಮುಖಾಂತರ ದೇವರಿಗೆಅರ್ಪಿಸಲಾಯಿತು.

ಈ ಸಂದರ್ಭದಲ್ಲಿ ಅರ್ಚಕರಾದ ರಾಮಕೃಷ್ಣ ಭಾರದ್ವಾಜ್, ಆಗಮಿಕ ದರ್ಶನ್, ಆಡಳಿತ ಅಧಿಕಾರಿ ರಾಜಶೇಖರ್ ಮಹೇಶ್, ಅನಂತಪ್ರಸಾದ್.ಸುರೇಶ್, ಡಾಕ್ಟರ್ ಬಾಲಸುಬ್ರಮಣ್ಯಂ ಇತರರು ಉಪಸ್ಥಿತರಿದ್ದರು.

# ರಾಯರ 355ನೇ ಆರಾಧನಾ ಮಹೋತ್ಸವ: ವಿಶೇಷ ಅಲಂಕಾರ

ಚಾಮರಾಜನಗರ, ಆ. 31, ನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ರಾಯರ 355ನೇ ಆರಾಧನಾ ಮಹೋತ್ಸವದ ಮಧ್ಯಾರಾಧನೆ ಅಂಗವಾಗಿ ಶ್ರೀ ರಾಘವೇಂದ್ರ ಸ್ವಾಮಿಗಳ ಮೂಲ ವೃಂದಾವನಕ್ಕೆ ವಿಶೇಷ ಅಲಂಕಾರ ನೆರವೇರಿಸಲಾಯಿತು.



ಮಧ್ಯಾರಾಧನೆಯ ಪ್ರಯುಕ್ತ ವಿವಿಧ ಹೂವುಗಳಿಂದ ವೃಂದಾವನವನ್ನು ಅಲಂಕರಿಸಿ, ವಿಶೇಷ ಪೂಜೆ ಹಾಗೂ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಮಠಕ್ಕೆ ಆಗಮಿಸಿ ರಾಯರ ದರ್ಶನ ಪಡೆದು ವಿಶೇಷ ಪೂಜೆಯಲ್ಲಿ ಪಾಲ್ಗೊಂಡರು.

ಆರಾಧನಾ ಮಹೋತ್ಸವದ ಅಂಗವಾಗಿ ಮಠದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

# ಜಾಯ್‌ಫುಲ್ ಮಾಸ್ಟರ್ ಕಲಾ ತಪಸ್ವಿ: ವೆಂಕಟರಮಣಸ್ವಾಮಿ

ಚಾಮರಾಜನಗರ, ಆ.31: ತಮಿಳುನಾಡಿನ ತಿಗನಾರೆ ಗ್ರಾಮದ ಮೂಲದವರಾಗಿ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ರಂಗಭೂಮಿಯನ್ನು ಕಟ್ಟಿದ, ಸಾವಿರಾರು ಶಿಷ್ಯರನ್ನು ರೂಪಿಸಿದ ಹಿರಿಯ ಹಾರ್ಮೋನಿಯಂ ವಾದಕ ಹಾಗೂ ಖ್ಯಾತ ನಾಟಕ ನಿರ್ದೇಶಕ, ಡಾ. ರಾಜ್‌ಕುಮಾರ್ ಕುಟುಂಬದ ಆಪ್ತರಾಗಿದ್ದ ದಿವಂಗತ ಜೆ. ಜಾಯ್‌ಫುಲ್ ಜಯಶೇಖರ್ (ಜಾಯ್‌ಫುಲ್ ಮಾಸ್ಟರ್) ಅವರ ಮಾಸದ ಸ್ಮರಣೆಯ ನುಡಿನಮನ ಕಾರ್ಯಕ್ರಮ ನಗರ ರೋಟರಿ ಭವನದಲ್ಲಿ ಶನಿವಾರ ಭಾವಪೂರ್ಣವಾಗಿ ನಡೆಯಿತು.

ಅಭಿಮಾನಿ ಬಳಗ, ಶಿಷ್ಯವೃಂದ ಹಾಗೂ ರೋಟರಿ ಸಂಸ್ಥೆ ಚಾಮರಾಜನಗರದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ಮತ್ತು ತಮಿಳುನಾಡಿನ ವಿವಿಧ ಗ್ರಾಮಗಳಿಂದ ನೂರಾರು ಶಿಷ್ಯರು, ಕಲಾಭಿಮಾನಿಗಳು ಪಾಲ್ಗೊಂಡು ಜಾಯ್‌ಫುಲ್ ಮಾಸ್ಟರ್ ಅವರ ಕಲಾ ಸೇವೆಯನ್ನು ಸ್ಮರಿಸಿದರು.

ಹಿರಿಯ ಹೋರಾಟಗಾರ ವೆಂಕಟರಮಣಸ್ವಾಮಿ (ಪಾಪು) ಅವರು ಜಾಯ್‌ಫುಲ್ ಮಾಸ್ಟರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿ, "ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವಾಗ ಹಾರ್ಮೋನಿಯಂ ನಾದವೇ ಕೇಳಿದ ಅನುಭವವಾಯಿತು. ಅವರು ಕೇವಲ ಕಲಾವಿದರಲ್ಲ, ಕಲಾ ತಪಸ್ವಿಯಾಗಿದ್ದರು. ನಾಲ್ಕು ದಶಕಗಳ ಕಾಲ ಕಲೆಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು" ಎಂದರು.

ಸಾಹಿತಿ ಮಂಜು ಕೊಡಿಉಗನೆ ಮಾತನಾಡಿ, "ನಮ್ಮ ಭಾಗದ ಹಲವು ಗ್ರಾಮಗಳಲ್ಲಿ ಇಂದಿಗೂ ನಾಟಕಗಳು ಉಳಿದಿವೆ ಎಂದರೆ ಅದಕ್ಕೆ ಜಾಯ್‌ಫುಲ್ ಮಾಸ್ಟರ್ ಅವರ ಕೊಡುಗೆ ಪ್ರಮುಖ. ಅವರು ಅಜಾತಶತ್ರುವಾಗಿದ್ದರು. ಡಾ. ರಾಜ್‌ಕುಮಾರ್ ಕುಟುಂಬದೊಂದಿಗೆ ಅವರಿಗಿದ್ದ ನಿಕಟ ಒಡನಾಟವೇ ಅವರ ಕಲಾ ಪ್ರತಿಭೆಗೆ ಸಾಕ್ಷಿ. ಅವರ ಬೆರಳುಗಳಲ್ಲಿ ಹಾರ್ಮೋನಿಯಂ ನರ್ತಿಸುತ್ತಿತ್ತು. ನಿರ್ದೇಶನದಲ್ಲಿ ಶಿಸ್ತು ಮತ್ತು ಸಂಯಮಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದರು" ಎಂದು ಹೇಳಿದರು.



ಹಿರಿಯ ರಂಗಕರ್ಮಿ ಕೆ. ವೆಂಕಟರಾಜು ಮಾತನಾಡಿ, "ತಿಗನಾರೆ ಗ್ರಾಮದಿಂದ ಬಂದು ಕರ್ನಾಟಕದಲ್ಲಿ ಸಾವಿರಾರು ಶಿಷ್ಯರನ್ನು ರೂಪಿಸಿದ ಅವರು ಹಣದ ಹಿಂದೆ ಹೋಗದೆ ಹಳ್ಳಿಗಳಲ್ಲಿ ಕಲೆಯನ್ನು ಉಳಿಸಿದ ಅಪರೂಪದ ಗುರು. ಅವರನ್ನು ಕಳೆದುಕೊಂಡಿರುವುದು ರಂಗಭೂಮಿಗೆ ತುಂಬಲಾರದ ನಷ್ಟ" ಎಂದರು.

ಶಿಷ್ಯ ಮಹಾಲಿಂಗ ಗಿರ್ಗಿ ಮಾತನಾಡಿ, "ಗುರುಗಳು ಕಲೆಯನ್ನೇ ಉಸಿರಾಗಿಸಿಕೊಂಡು ಬದುಕಿದರು. ಕಷ್ಟದ ಸಂದರ್ಭದಲ್ಲಿಯೂ ಹಾರ್ಮೋನಿಯಂ ಕೈಬಿಡಲಿಲ್ಲ. ಕರ್ನಾಟಕ ಹಾಗೂ ತಮಿಳುನಾಡಿನ ವಿವಿಧ ಗ್ರಾಮಗಳಿಂದ ನೂರಾರು ಶಿಷ್ಯರು ಆಗಮಿಸಿರುವುದನ್ನು ನೋಡಿದರೆ ಅವರ ಆತ್ಮಕ್ಕೆ ಶಾಂತಿ ಸಿಕ್ಕಂತಾಗಿದೆ" ಎಂದು ಭಾವುಕರಾದರು.

ಕಾರ್ಯಕ್ರಮದಲ್ಲಿ ಜಾಯ್‌ಫುಲ್ ಮಾಸ್ಟರ್ ಅವರ ಧರ್ಮಪತ್ನಿ ಸೌಭಾಗ್ಯಮ್ಮ, ಹರಿಕಥೆ ಕಲಾವಿದ ಪುಟ್ಟಸ್ವಾಮಪ್ಪ, ರೋಟರಿ ಅಧ್ಯಕ್ಷ ಅಜೀಜ್ (ದೀನಾ), ಸಿ.ಎಂ. ನರಸಿಂಹಮೂರ್ತಿ, ಪದ್ಮನಾಭ, ಡ್ರಾಮಾ ಮಾಸ್ಟರ್ ಶಿವಣ್ಣ, ಕಿರಣ್ ಗಿರ್ಗಿ, ಜಿತೇಂದ್ರನಾಗ್, ಮಧುಸೂದನ್, ಸಿದ್ದರಾಜು, ಶಿವಕುಮಾರ್, ಕುಮಾರ್, ರಿದಂ ರಾಮಣ್ಣ ಸೇರಿದಂತೆ ಶಿಷ್ಯರು, ಕುಟುಂಬದ ಸದಸ್ಯರು ಹಾಗೂ ಅಭಿಮಾನಿಗಳು ಉಪಸ್ಥಿತರಿದ್ದರು.

ವೇದಿಕೆ ಕಾರ್ಯಕ್ರಮದ ಬಳಿಕ ಜಾಯ್‌ಫುಲ್ ಮಾಸ್ಟರ್ ಅವರ ಸ್ಮರಣಾರ್ಥ ಶಿಷ್ಯಬಳಗದ ವತಿಯಿಂದ ರಂಗಗೀತೆ ಗಾಯನ ಕಾರ್ಯಕ್ರಮ ನಡೆಯಿತು.

# ಮೂಡಲ ಹೊಸಹಳ್ಳಿಗೆ ಮದ್ಯದಂಗಡಿ ಸ್ಥಳಾಂತರ ಬೇಡ-ರಾಮಸಮುದ್ರ ಸುರೇಶ್

ಚಾಮರಾಜನಗರ, ಆ. 31, ತಾಲ್ಲೂಕಿನ ಮೂಡಲ ಹೊಸಹಳ್ಳಿ ಗ್ರಾಮಕ್ಕೆ ಯಾವುದೇ ಕಾರಣಕ್ಕೂ ಅನಧಿಕೃತ ಹಾಗೂ ಕಾನೂನು ಬಾಹಿರವಾಗಿರುವ ಸಂದೇಶ್ ಬಾರ್‌ಅನ್ನು ಸ್ಥಳಾಂತರ ಮಾಡಬಾರದುಎಂದು ಜನ ಹಿತಾಶಕ್ತಿ ಹೋರಾಟ ವೇದಿಕೆಯ ಅಧ್ಯಕ್ಷ ರಾಮಸಮುದ್ರ ಸುರೇಶ್ ಆಗ್ರಹಿಸಿದರು.



ನಗರದ ಜಿಲ್ಲಾಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣದಲ್ಲಿಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ನಕಲಿ ಪರವಾನಿಗಿ ಹೊಂದಿರುವ ಈಊ ಬಾರ್‌ನ್ನುತಾಲ್ಲೂಕಿನ ಮೂಡಲ ಹೊಸಹಳ್ಳಿ ಗ್ರಾಮಕ್ಕೆಅನಧಿಕೃತವಾಗಿ ಹಾಗೂ ಕಾನೂನು ನಿಯಮ ಉಲ್ಲಂಘಿಸಿ ಸ್ಥಳಾಂತರ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಅರಕಲವಾಡಿಗ್ರಾಮ ಪಂಚಾಯಿತಿಯಿಂದ ಸದರಿ ಮಧ್ಯದಂಗಡಿ ನಡೆಸುವಮಾಲೀಕರಿಗೆ ಮಾಂಸಹಾರಿ ಮತ್ತು ಸಸ್ಯಹಾರಿ ಸಂದೇಶ ಹೋಟೆಲ್ ನಡೆಸುವ ಉದ್ದೇಶಕ್ಕಾಗಿ ಜನರಲ್ ಲೈಸೆನ್ಸ್ ನೀಡಿರುತ್ತಾರೆ. ಆದರೆ ಏಕಾಏಕಿ ಸಾಗಡೆಗ್ರಾಮದಲ್ಲಿ ನಡೆಯುತ್ತಿರುವ ಸಂದೇಶ್ ಬಾರ್‌ನ್ನು ಮೂಡಲ ಹೊಸಹಳ್ಳಿ ಗ್ರಾಮಕ್ಕೆ ಸ್ಥಳಾಂತರ ಮಾಡುವ ಹುನ್ನಾರ ಹೂಡಿದ್ದಾರೆ.ಜನರಲ್ ಲೈಸೆನ್ಸ್‌ತೆಗೆದುಕೊಂಡಿರುವ ಉದ್ದೇಶವೆ ಬೇರೆ, ನಡೆಸಲು ಹೊರಟಿರುವ ಉದ್ದೇಶ ಬೇರೆ ಆಗಿದೆಎಂದರು,

ನಕಲಿ ದಾಖಲಾತಿಗಳನ್ನು ಸೃಷ್ಟಿ ಮಾಡಿಎಲ್ಲಾಕಾರ್ಯ ವೈಖರಿ, ಕೆಲಸಗಳನ್ನು ನಡೆಸಲುಜಿಪಿಎ ಸೃಷ್ಟಿಸಿಕೊಂಡಿರುತ್ತಾರೆ.

ಕಾಣದ ಕೈಗಳು ಹಾಗೂ ಪಟ್ಟಬದ್ರ ಹಿತಾಸಕ್ತಿಗಳ ಪ್ರೋತ್ಸಾಹದ ಮೇಲೆ ಸದರಿ ಸಂದೇಶ್ ಬಾರ್‌ಅನ್ನು ಸಾಗಡೆಗ್ರಾಮದಿಂದ ಮೂಡಲ ಹೊಸಹಳ್ಳಿ ಗ್ರಾಮಕ್ಕೆ ವರ್ಗಾವಣೆ ಮಾಡುವ ಹುನ್ನಾರ ನಡೆಸುತ್ತಿರುವುದನ್ನು ಈ ಕೂಡಲೇ ಸ್ಥಗಿತಗೊಳಿಸಬೇಕು ಹಾಗೂ ಕಾನೂನು ನಿಯಮ ಉಲ್ಲಂಘಿಸಿ ನಡೆಸುತ್ತಿರುವ ಸಾಗಡೆಗ್ರಾಮದಲ್ಲಿ ನಡೆಯುತ್ತಿರುವ ಸಂದೇಶ್ ಬಾರ್‌ನ ಪರವಾನಿಗಿ ರದ್ದುಗೊಳಿಸಿ ಅನಧಿಕೃತವಾಗಿ ನಡೆಸಿಕೊಂಡು ಬಂದಿರುವತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು,

ಈ ಬಗ್ಗೆ ಅಬಕಾರಿ ಇಲಾಖೆ ಅಧಿಕಾರಿಗಳು ಒಂದು ವಿಶೇಷ ತನಿಖಾತಂಡವನ್ನು ರಚಿಸಿ ಇದರ ಪೂರ್ಣ ಪ್ರಮಾಣದ ಮಾಹಿತಿ ಪಡೆದು ನಂತರ ಪರವಾನಿಗಿ ಮುಂದುವರೆಸಬೇಕೋ ಅಥವಾ ರದ್ದು ಪಡಿಸಬೇಕೋಎಂದು ಮಾಹಿತಿ ಸಿಗುವವರೆಗೂ ಸದರಿ ಬಾರ್ ಅನ್ನು ಯಾವುದೇಕಾರಣಕ್ಕೂ ಸ್ಥಳಾಂತರ ಮಾಡಬಾರದೆಂದು ಆಗ್ರಹಿಸಿದರು/

ಪತ್ರಿಕಾಗೋಷ್ಠಿಯಲ್ಲಿ ವೇದಿಕೆಯ ಪ್ರದಾನಕಾರ್ಯದರ್ಶಿ ಕಾಡಹಳ್ಳಿ ನಾಗರಾಜ್, ಸಂಯೋಜಕ ಕೆರೆಹಳ್ಳಿ ಬಸವರಾಜು, ಜಿಲ್ಲಾದಲಿತ ಸಂಘರ್ಷ ಸಮಿತಿ ಸಂಯೋಜಕ ಸಿ. ರಂಗಸ್ವಾಮಿ,ಜಿಲ್ಲಾ ಸಂಯೋಜಕಎಂ.ಆರ್.ಪ್ರಭಾವತಿ ಇದ್ದರು.

## ಸೆ. 5ರಂದು ಶಿಕ್ಷಕರ ದಿನಾಚರಣೆ ಹಾಗೂ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ

ಚಾಮರಾಜನಗರ, ಆಗಸ್ಟ್ 31 (– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಜಿಲ್ಲಾ ಮತ್ತು ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಸೆಪ್ಟೆಂಬರ್ 5 ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9.30 ಗಂಟೆಗೆ ನಗರದ ಸರ್ಕಾರಿ ಪೇಟೆ ಹಿರಿಯ ಪ್ರಾಥಮಿಕ ಶಾಲೆ ಆವರಣದಿಂದ ಡಾ. ಎಸ್. ರಾಧಾಕೃಷ್ಣನ್ ಮತ್ತು ಸಾವಿತ್ರಿಬಾಯಿ ಫುಲ್ ರವರ ಭಾವಚಿತ್ರದ ಮೆರವಣಿಗೆ ಹೊರಡಲಿದೆ. ಬೆಳಿಗ್ಗೆ 10 ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.


**ಕರ್ನಾಟಕ ಸರ್ಕಾರ**

**ಕಾರ್ಯಪಾಲಕ ಇಂಜಿನಿಯರ್ ರವರ ಕಚೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ**

**ಇ–ಪ್ರೊಕ್ಯೂರ್ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ**

**ಸಂಖ್ಯೆ : 18/2026–27 ದಿನಾಂಕ: 25–08–2026**

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರಗಳನ್ನು ವಿವಿಧ ಇಲಾಖೆಯ ಲೆಕ್ಕ ಶೀರ್ಷಿಕೆ ಯೋಜನೆಯಡಿ ಕರೆದಿರುವ ಕಾಮಗಾರಿಗಳನ್ನು KW-1 (Stanard Tender Document) ಪ್ರಕಾರ ಏಕಕಕ ಮುಖಾಂತರ ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮಗಳು KTPP Act 1999 and KTPP Rule 2000 ರಲ್ಲಿ ಸಿವಿಲ್ ಗುತ್ತಿಗೆದಾರರುಗಳಿಂದ ಏಕ ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಅಂದಾಜು ಮೊತ್ತ ರೂ. 68.50 ಲಕ್ಷಗಳ ಒಟ್ಟು 04 ಟೆಂಡರ್ ಅಹ್ವಾನಿಸಲಾಗಿದೆ. ಆನ್ ಲೈನ್ ಟೆಂಡರ್ ಅಪ್ ಲೋಡ್ ಮಾಡುವ ದಿನಾಂಕ : 28–08–2026 ಕೊನೆಯ ದಿನಾಂಕ: 16–09–2026 ಸಂಜೆ 17.00 ಗಂಟೆಯ ವರೆಗೆ. ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18–09–2026 ಇನ್ನುಳಿದ ಹೆಚ್ಚಿನ ಮಾಹಿತಿಗಳನ್ನು KPPP website www.kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಚೇರಿ ದೂರವಾಣಿ ಸಂಖ್ಯೆ: 08226–223019ಕ್ಕೆ ಸಂಪರ್ಕಿಸುವುದು.

**ಕಾರ್ಯಪಾಲಕ ಇಂಜಿನಿಯರ್**
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಚಾಮರಾಜನಗರ

ಸಂ: ವಾಸಾಸಂಇ/ಚಾ.ನಗರ/324: 2026–27



Helpline: 08229-223377
E-mail: tmc gundlupet@yahoo.com
Website: www.gundlupettown.gov.in

**ಪುರಸಭಾ ಕಾರ್ಯಾಲಯ, ಗುಂಡ್ಲುಪೇಟೆ.**
**ಚಾಮರಾಜನಗರ ಜಿಲ್ಲೆ–571111**

ಸಂಖ್ಯೆ:\ಪು.ಗು/ಕಂ.ಶಾ/ಅರಾಧ್ಯ ಕ್ಷೇಮಾಭಿವೃದ್ಧಿ ಸಂಘ/ಪಿಆರ್/01/2025–26 ದಿನಾಂಕ : 27.08.2026

**ಸಾರ್ವಜನಿಕ ಪ್ರಕಟಣೆ**

ವಿಷಯ : ಗುಂಡ್ಲುಪೇಟೆ ಪಟ್ಟಣದ ಆರ್.ಆರ್.ಬಡಾವಣೆಯಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿರಿಸಿರುವ ಅಸೆಸ್ ಮೆಂಟ್ ಅ.ನಂ.2784/88ರ ಅಳತೆ 50+66 ಅಡಿ ನಿವೇಶನದಲ್ಲಿ ರೇಣುಕಾ ಭವನ ನಿರ್ಮಾಣ ಮಾಡಲು ನಿವೇಶನವನ್ನು ನೀಡುವ ಬಗ್ಗೆ.

ಉಲ್ಲೇಖ :1. ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು, ಅರಾಧ್ಯ ಕ್ಷೇಮಾಭಿವೃದ್ಧಿ ಸಂಘ(ರಿ) ಕೋಡಹಳ್ಳಿ ಸರ್ಕಲ್, ಗುಂಡ್ಲುಪೇಟೆ ತಾಲ್ಲೂಕು ರವರ ಮನವಿ ದಿನಾಂಕ 09.10.2025
2. ದಿನಾಂಕ: 15.10.2025ರಂದು ನಡೆದ ಪುರಸಭಾ ಸಾಮಾನ್ಯ ಸಭೆಯ ಠರಾವು ಸಂಖ್ಯೆ 21/13)ರ ರೀತ್ಯಾ.
3. ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/2002 ಬೆಂಗಳೂರು ದಿನಾಂಕ : 02.06.2003.

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ, ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು, ಅರಾಧ್ಯ ಕ್ಷೇಮಾಭಿವೃದ್ಧಿ ಸಂಘ(ರಿ) ಕೋಡಹಳ್ಳಿ ಸರ್ಕಲ್, ಗುಂಡ್ಲುಪೇಟೆ ತಾಲ್ಲೂಕು ರವರು ರೇಣುಕಾ ಭವನ ನಿರ್ಮಾಣ ಮಾಡುವ ಉದ್ದೇಶಕ್ಕೆ ಪುರಸಭೆಯಿಂದ ಸಾರ್ವಜನಿಕರ ಉದ್ದೇಶಕ್ಕಾಗಿ ಮೀಸಲಿರಿಸಿರುವ ನಿವೇಶನವನ್ನು ಕೋರಿರುವ ಮೇರೆಗೆ ಉಲ್ಲೇಖ (2)ರ ತೀರ್ಮಾನದಂತೆ ಆರ್. ಆರ್ ಬಡಾವಣೆಯಲ್ಲಿರುವ ಸಾರ್ವಜನಿಕರ ಉದ್ದೇಶಕ್ಕಾಗಿ ಮೀಸಲಿರಿಸಿರುವ ಪುರಸಭಾ ಆಸ್ತಿ ಸಂಖ್ಯೆ: 2784/88ರ ಅಳತೆ 50+66 ಅಡಿ ನಿವೇಶನದಲ್ಲಿ ರೇಣುಕಾ ಭವನ ನಿರ್ಮಾಣ ಉದ್ದೇಶಕ್ಕೆ ನೀಡಬಹುದೆಂದು ತೀರ್ಮಾನಿಸಲಾಗಿದ್ದು.

ಅದರಂತೆ, ಸದರಿ ನಿವೇಶವನ್ನು ಉಲ್ಲೇಖ (3)ರ ಸುತ್ತೋಲೆಯಂತೆ ರೇಣುಕಾ ಭವನ ನಿರ್ಮಾಣ ಮಾಡುವ ಉದ್ದೇಶಕ್ಕೆ ನಿವೇಶನವನ್ನು ನೀಡುವ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆ ಇದ್ದಲ್ಲಿ ಲಿಖಿತ ಮೂಲಕ ಆಕ್ಷೇಪಣೆಗಳನ್ನು ಈ ಪ್ರಕಟಣೆ ಹೊರಡಿಸಿದ 30ದಿನದೊಳಗೆ ಈ ಕಛೇರಿಗೆ ಸಲ್ಲಿಸಬಹುದಾಗಿರುತ್ತದೆ. ತಪ್ಪಿದ್ದಲ್ಲಿ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ ಎಂದು ಭಾವಿಸಿ ನಿವೇಶನವನ್ನು ಮಂಜೂರು ಮಾಡಲು ಕ್ರಮವಹಿಸಲಾಗುವುದು ಎಂದು ತಿಳಿಯುವುದು.

**ನಿವೇಶನದ ಚೆಕ್ ಬಂದಿ:–**
ಪೂರ್ವಕ್ಕೆ : ರಸ್ತೆ
ಪಶ್ಚಿಮಕ್ಕೆ : ರಸ್ತೆ.
ಉತ್ತರಕ್ಕೆ : ಉಳಿಕೆ ನಾಗರೀಕ ನಿವೇಶನ.
ದಕ್ಷಿಣಕ್ಕೆ : ಅಂಗನವಾಡಿ ಜಾಗಕ್ಕೆ ಮೀಸಲಿರಿಸಿರುವ ಜಾಗ.

ಸಹಿ/–
**ಆಡಳಿತಾಧಿಕಾರಿಗಳು,**
ಪುರಸಭೆ, ಗುಂಡ್ಲುಪೇಟೆ.

ಸಹಿ/–
**ಮುಖ್ಯಾಧಿಕಾರಿ**
ಪುರಸಭೆ, ಗುಂಡ್ಲುಪೇಟೆ

ಸಂ: ವಾಸಾಸಂಇ.ಚಾ.ನಗರ/316:2026–27


# ಕಲಾವಿದರ ಗುರುತಿನ ಚೀಟಿ ಪಡೆಯಲು ಅರ್ಜಿ ಆಹ್ವಾನ

ಚಾಮರಾಜನಗರ, ಆಗಸ್ಟ್ 31 ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಎರಡನೇ ಹಂತದಲ್ಲಿ ವಿವಿಧ ಕಲಾ ಪ್ರಕಾರದ ಕಲಾವಿದರು ಕಲಾವಿದರ ಪಿವಿಸಿ ಗುರುತಿನ ಚೀಟಿ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಕಲಾವಿದರ ದತ್ತಾಂಶ ಯೋಜನೆಯಡಿ ಗುರುತಿನ ಚೀಟಿಗೆ ಶಿಫಾರಸ್ಸು ಮಾಡದ ಹೊಸ ಕಲಾವಿದರು ಜಿಲ್ಲೆಯಲ್ಲಿ ಬಾಕಿ ಇದ್ದಲ್ಲಿ ಅಂತಹವರನ್ನು ಗುರುತಿಸಿ ಎರಡನೇ ಹಂತದಲ್ಲಿ ಪಿವಿಸಿ ಗುರುತಿನ ಚೀಟಿ ಪಡೆಯಲು ಅರ್ಜಿ ಕರೆಯಲಾಗಿದೆ.

ಸೆಪ್ಟೆಂಬರ್ 1 ರಿಂದ ನಿಗದಿತ ನಮೂನೆಯ ಅರ್ಜಿಗಳನ್ನು ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಪಡೆದು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಸೆಪ್ಟೆಂಬರ್ 30 ರೊಳಗೆ ಸಲ್ಲಿಸಬೇಕು.

PUBLISHER,PRINTER,OWNED & EDITOR:SAVITHAJAYANTH,RESHMENADU DAILY. PRINTED AT JANAPARA OFFSET MUDRANA, BRAMARAMBHA EXTENSION,5TH CROSS, CHAMARAJANAGAR-571313,PHONE:08226-222623